ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-4 (ವರಶಂಕರ)

ದಿನಾಂಕ: 01-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಲ್.ಎಸ್.ಬಿ. ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

**ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. 1 ಮತ್ತು 2ನೇ ಪ್ರತಿವಾದಿ ಪರ ವಕೀಲರಿಂದಃ**

ಬಗರನಾಳ ಗ್ರಾಮದಲ್ಲಿ ನನಗೆ ಸೇರಿದ ಆಸ್ತಿಗಳು ಇರುವುದಿಲ್ಲ. ಪಿ.ಡಬ್ಲ್ಯೂ-3 ವಾದಿಯ ತಾಯಿ ಎಂದರೆ ಸರಿ. ಗೋಕಾಕನಲ್ಲಿ ಮರಾಠಾ ಗಲ್ಲಿ ಮತ್ತು ಆಚಾರ್ಯ ಗಲ್ಲಿ ಸ್ವಲ್ಪ ದೂರ ಇವೆ. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಮತ್ತು ಪ್ರತಿವಾದಿಯರಿಗೆ ಸೇರಿದ ಯಾವುದೇ ಆಸ್ತಿಗಳು ಗೋಕಾಕನಲ್ಲಿ ಇರುವುದಿಲ್ಲ ಎಂದರೆ ಸರಿ. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಇವರು ತೀರಿಕೊಂಡು ಈಗ ಅಂದಾಜ 02 ವರ್ಷಗಳಾಗಿವೆ.

2. ಸರ್ವೆ ನಂ.24/1 ರ ಪಹಣಿ ಪತ್ರಿಕೆ ನಿಪಿ-2 ರ ಪ್ರಕಾರ ವಾದಿಯ ತಾಯಿ ಹಾಗೂ ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಈಗಲೂ ಜಂಟಿ ಇದೆ ಎಂದರೆ ಸರಿ. ಸರ್ವೆ ನಂ.26/1 ಕ್ಷೇತ್ರ 03ಎ-08ಗುಂಟೆಯಲ್ಲಿ ಈಹೊತ್ತಿಗೂ ಸಹ ವಾದಿಯ ತಾಯಿ ಮತ್ತು ಪ್ರತಿವಾದಿಯರ ನಡುವೆ ಪಾಲು ಆಗಿಲ್ಲ ಎಂದರೆ ಸರಿ.

ನಿಪಿ-2 ರ ಪ್ರಕಾರ ಸರ್ವೆ ನಂ.26/1 ರ 03ಎಕರೆ-08ಗುಂಟೆಗೆ ವಾದಿಯ ತಾಯಿ ಮತ್ತು ಪ್ರತಿವಾದಿಯರ ಸಾಮೂಹಿಕ ಕಬ್ಜೆ ಎಂದು ತೋರಿಸುತ್ತದೆ ಎಂದರೆ ಸರಿ.

3. ಖರೀದಿ ಕರಾರು ಪತ್ರ ಆಗುವ ಸಮಯದಲ್ಲಿ 01ಎಕರೆ 24ಗುಂಟೆ ಜಮೀನು ಮೃತ ಭೀಮನಾಯ್ಕ ಹಾಗೂ ಪ್ರತಿವಾದಿಯರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಪ್ರತಿವಾದಿಯರು ಯಾವುದೇ ದಾಖಲೆ ತಂದಿರಲಿಲ್ಲ. ನಿಪಿ-1 ರಲ್ಲಿ ತೋರಿಸಿರುವ 01ಎಕರೆ 24ಗುಂಟೆ ಜಮೀನಿನ ಪೂರ್ವಕ್ಕೆ ನಿಂಗವ್ವ ಭೀಮಪ್ಪ ನಾಯ್ಕ ಎಂದು ತೋರಿಸಿದ್ದು, ಸದರಿ ಜಮೀನಿಗೆ ಪೂರ್ವಕ್ಕೆ ನಿಂಗವ್ವ ಭೀಮಪ್ಪ ನಾಯ್ಕ ಅಂದರೆ ವಾದಿಯ ತಾಯಿಯ ಜಮೀನು ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನಿಪಿ-2 ರಲ್ಲಿ ನಿಂಗವ್ವ ಭೀಮಪ್ಪ ನಾಯ್ಕ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ರೂ.1,000/- ಕ್ಕೆ ಭೋಜಾ ಇದ್ದುದ್ದನ್ನು ಹೊರತುಪಡಿಸಿ ಬೇರೆ ಭೋಜಾ ಇದೆ ಎಂದು ನಮೂದು ಇಲ್ಲ ಎಂದರೆ ಸರಿ. ರೂ.1,000/- ಕ್ಕೆ ಇರುವ ಭೋಜಾ ಭೀಮನಾಯ್ಕ ಹುಚ್ಚಪ್ಪ ನಾಯ್ಕ ಇವರ ಕಾಲದಿಂದಲೇ ಇದೆ ಎಂದರೆ ಸರಿ.

4. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಹಾಗೂ ಪ್ರತಿವಾದಿಯರು ಯಾರ ಬಳಿ ಎಷ್ಟು ಸಾಲ ಪಡೆದಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಹಾಗೂ ಪ್ರತಿವಾದಿಯರ ಮೇಲೆ ಸಾಲ ಕೊಟ್ಟವರು ಸಾಲ ವಸೂಲಾತಿಗಾಗಿ ಯಾವುದೇ ದಾವೆ ಹೂಡಿರುವುದಿಲ್ಲ.

5. ನಿಪಿ-2ರಲ್ಲಿ ದಾವಾ ಆಸ್ತಿಯು ನೀರಾವರಿ ಆಸ್ತಿಯಾಗಿದ್ದು ಅದರಲ್ಲಿ ಕಬ್ಬು ಬೆಳೆಯುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ-1 ರಲ್ಲಿ ಜಮೀನು ಒಣಬೇಸಾಯದ ಜಮೀನು ಎಂದು ಬರೆಯಲಾಗಿದೆ. ನಾನು ನಿಪಿ-1 ರಲ್ಲಿ ಜಮೀನು ಒಣಬೇಸಾಯದ ಜಮೀನು ಎಂದು ಬರೆದಿರುವುದಕ್ಕೆ ಸಾಕ್ಷಿ ಹೇಳುತ್ತಿದ್ದೇನೆ. ಈಗ ಸಾಕ್ಷಿದಾರರಿಗೆ ನಿಪಿ-1ನ್ನು ತೋರಿಸಿದ್ದು ಅದರಲ್ಲಿ ಬಾಗಾಯತ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ ಎಂದು ಹೇಳುತ್ತಾರೆ. ಖರೀದಿ ಕರಾರ ಪತ್ರ ಆದ ಸಮಯದಲ್ಲಿ ಬಗರನಾಳ ಗ್ರಾಮದಲ್ಲಿ 01ಎಕರೆ ನೀರಾವರಿ ಜಮೀನಿಗೆ ರೂ.15,00,000/- ರಿಂದ ರೂ.20,00,000/- ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿದಾರರು ಆಗ ಬಗರನಾಳ ಗ್ರಾಮದ ನೀರಾವರಿ ಜಮೀನಿಗೆ ಎಕರೆ ರೂ.3,75,000/- ಬೆಲೆ ಆಗುತ್ತಿತ್ತು ಎಂದು ಹೇಳುತ್ತಾರೆ.

6. ಮೃತ ಭೀಮಪ್ಪ ಹುಚ್ಚಪ್ಪ ನಾಯ್ಕ ವಾದಿಯ ತಾಯಿಯ ತಂಗಿಯ ಗಂಡ ಎಂದರೆ ಸರಿ. ದಿನಾಂಕ 11/07/2017 ರಂದು ಖರೀದಿ ಕರಾರ ಪತ್ರ ಆಗಿದ್ದು ಅದಕ್ಕಿಂತ ಒಂದು ತಿಂಗಳ ಮೊದಲು ಖರೀದಿ ಮಾತುಕತೆ ಆಗಿರುತ್ತದೆ. ಖರೀದಿ ಮಾತುಕತೆ ಗೋಕಾಕನಲ್ಲಿ ವಾದಿಯ ಮನೆಯಲ್ಲಿ ಆಗಿರುತ್ತದೆ. ಮಾತುಕತೆ ಆದ ದಿನ ವಾದಿ ಮುಂಗಡವಾಗಿ ಯಾವುದೇ ದುಡ್ಡು ಕೊಟ್ಟಿಲ್ಲ. ಸಾಮಾನ್ಯವಾಗಿ ಹಿರಿಯರ ಸಮಕ್ಷಮ ಮಾತುಕತೆ ಆದಾಗ ಸಂಚಕಾರ ಎಂದು ಹಣ ಕೊಡುವ ಪದ್ದತಿ ಇದೆ ಎಂದರೆ ಸರಿಯಲ್ಲ.

7. ಖರೀದಿ ಕರಾರ ಪತ್ರ ಆಗುವ ಸಮಯದಲ್ಲಿ ನಾನು, ದೀಪಕ ಕಲ್ಲೋಳಿ, ಚಿನ್ನವ್ವ ಕಲ್ಲೋಳಿ ಹಾಜರ ಇದ್ದೆವು ಎಂದು ತೋರಿಸಲು ಖರೀದಿ ಕರಾರ ಪತ್ರದಲ್ಲಿ ನಮ್ಮ ಸಹಿ ಇಲ್ಲ ಎಂದರೆ ಸರಿ. ಭೀಮಪ್ಪ ಹುಚ್ಚಪ್ಪ ನಾಯ್ಕ ನಾವು ಮನೆಯವರಿದ್ದೇವೆ ಬೇರೆಯವರ ಸಹಿ ಬೇಡ ಎಂದಿದ್ದಕ್ಕೆ ನಾವು ಸಹಿ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವುದಕ್ಕಿಂತ ಮೊದಲು ನನಗೆ ಖರೀದಿ ಕರಾರ ಪತ್ರದಲ್ಲಿ ನನ್ನ, ದೀಪಕ ಕಲ್ಲೋಳಿ ಮತ್ತು ಚಿನ್ನವ್ವ ಕಲ್ಲೋಳಿ ಇವರ ಸಹಿಗಳು ಇರಲಿಲ್ಲ ಎಂದು ಗೊತ್ತಿತ್ತು.

8. ರೂ.6,00,000/- ಖರೀದಿ ವ್ಯವಹಾರದ ಪೈಕಿ ರೂ.5,16,000/- ಮುಟ್ಟಿರುತ್ತದೆ ಎಂದು ಹೇಳಿ ಖರೀದಿ ಕರಾರ ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ. ಖರೀದಿ ಕರಾರ ಪತ್ರ ತಯಾರ ಮಾಡುವಾಗ ಹಾಗೂ ನೋಂಣಿ ಆಗುವಾಗ ನಾನು ಹಾಜರ ಇದ್ದೆ. ನನ್ನ ಪ್ರಕಾರ ರೂ.5,16,000/- ಪ್ರತಿವಾದಿಯರಿಗೆ ದಿನಾಂಕ 26/07/2017 ರಂದು ಮುಟ್ಟಿರುತ್ತವೆ. ದಿನಾಂಕ 11/07/2017 ರಂದು ಪ್ರತಿವಾದಿಯರಿಗೆ ವಾದಿಯಿಂದ ರೂ.5,16,000/- ಮುಟ್ಟಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ದಿನಾಂಕ 11/07/2017 ರಂದು ರೂ.5,16,000/- ಮುಟ್ಟಿದೆ ಎಂದು ಬರೆಯಲಾಗಿದೆ.

9. ದಿನಾಂಕ 11/07/2017 ರಂದು ವಾದಿಯಿಂದ ಪ್ರತಿವಾದಿಯರಿಗೆ ರೂ.5,16,000/- ಮುಟ್ಟಿಲ್ಲ ಎಂದು ನನಗೆ, ವಾದಿಗೆ, ಪ್ರತಿವಾದಿಯರಿಗೆ, ದೀಪಕ ಕಲ್ಲೋಳಿ ಹಾಗೂ ಚಿನ್ನವ್ವ ಕಲ್ಲೋಳಿ ಇವರಿಗೆ ಗೊತ್ತಿದೆ ಎಂದರೆ ಸರಿ. ದಿನಾಂಕ

26/07/2017 ರಂದು ಖರೀದಿ ಕರಾರ ಪತ್ರ ಆಗಿದೆ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದು ಪ್ರಶ್ನಿಸಿದರೆ ಸಾಕ್ಷಿದಾರರು ಆಗ ತಾವು ಹಾಜರ ಇದ್ದರು ಎಂದು ಹೇಳುತ್ತಾರೆ. ದಿಃ 26/07/2017 ರಂದು ಖರೀದಿ ಕರಾರ ಪತ್ರ ನೋಂದ ಆಗುವುದಕ್ಕಿಂತ ಮೊದಲು ನಾನು ಅದನ್ನು ಓದಿಲ್ಲ. ಅದೇ ರೀತಿ ಬಸಪ್ಪ ಹಾಲನ್ನವರ, ದೀಪಕ ಕಲ್ಲೋಳಿ, ಚಿನ್ನವ್ವ ಕಲ್ಲೋಳಿ ಇವರೂ ಸಹ ಖರೀದಿ ಕರಾರ ಪತ್ರವನ್ನು ನೋಂದ ಆಗುವುದಕ್ಕಿಂತ ಮೊದಲು ಓದಿಲ್ಲ.

10. ರೂ.5,16,000/- ಮೊತ್ತವನ್ನು ದಿಃ 26/07/2017 ರಂದು ವಾದಿ ತಮ್ಮ ಮನೆಯಲ್ಲಿ ಪ್ರತಿವಾದಿಯರಿಗೆ ಕೊಟ್ಟಿರುತ್ತಾರೆ. ನನಗೆ ವಾದಿ ಕಳೆದ 20 ವರ್ಷಗಳಿಂದ ಪರಿಚಯ. ನಮಗು ಮತ್ತು ವಾದಿಗು ಒಳ್ಳೆಯ ಸಂಬಂಧ ಇದೆ ಎಂದರೆ ಸರಿ. ದಿಃ 11/07/2017 ರಂದು ಕರಾರ ಪತ್ರ ತಯಾರ ಆಯಿತು, ದಿಃ26/07/2017 ರಂದು ವಾದಿಯಿಂದ ಪ್ರತಿವಾದಿಯರು ರೂ.5,16,000/- ಪಡೆದು ಕರಾರ ಪತ್ರವನ್ನು ನೋಂದ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಭೀಮಪ್ಪ ನಾಯ್ಕ ಹಾಗೂ ಅವರ ಮಗ ಮತ್ತು ಸೊಸೆ ಯಾವತ್ತೂ ಮಾರಾಟಕ್ಕೆ ತೆಗೆದಿಲ್ಲ ಆದರೂ ಸಹ ವಾದಿ ನನಗೆ ಪರಿಚಯ ಇದ್ದುದ್ದರಿಂದ ನಾನು ಮತ್ತು ವಾದಿ ಸೇರಿಕೊಂಡು ಖರೀದಿ ಕರಾರ ಪತ್ರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-4 (ವರಶಂಕರ)

11. ಖರೀದಿ ಕರಾರ ಪತ್ರ ಬರೆದುಕೊಟ್ಟ ದಿನಾಂಕದಿಂದ ನೋಂದಣಿ ಮಾಡಿಸುವವರೆಗು 15 ದಿನಗಳ ಅಂತರ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ